**ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ರೋಣ**

ಅಸಲು ದಾವೆ ನಂ. 76/2017

ಪಿ.ಡಬ್ಲೂಃ 4

| | |
|---|---|
| ಹೆಸರುಃ | ಸೋಮಶೇಖರ |
| ತಂದೆಯ ಹೆಸರುಃ | ರಾಮಪ್ಪ ವೀರೇಶಣ್ಣವರ |
| ವಯಸ್ಸುಃ | 50 ವರ್ಷ |
| ಉದ್ಯೋಗಃ | ಗ್ರಾಮಪಂಚಾಯತಿ ಕಾರ್ಯದರ್ಶಿ ಲಿಂಗದಾಳ ಗ್ರಾಮ ಪಂಚಾಯತಿ |
| ವಿಳಾಸಃ | ಡ.ಸ. ಹಡಗಲಿ ತಾಃ ರೋಣ. |

**ಸಾಕ್ಷಿಗೆ ದಿನಾಂಕಃ 16–09–2022 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ– ಪ್ರತಿವಾದಿ ಪರ ಶ್ರೀ. ವಿ.ಎಸ್. ಬಿ. ವಕೀಲರಿಂದಃ–**

1. ವಿ.ಪಿ.ಸಿ. ನಂ.203 ಜಾಗದ ಉತಾರವನ್ನು ನಾನೇ ಬರೆದಿದ್ದು. ಬರೆದಿದ್ದ ಇಸ್ವಿ ನನಗೆ ನೆನೆಪಿಲ್ಲ. ನಾನು ನಮೂನೆ 9 ಆಸ್ತಿ ರಿಜಿಸ್ಟರ ನೋಡಿ ಸದರಿ ಉತಾರವನ್ನು ಪಿ.ಡಿ.ಓ ರವರ ಹೇಳಿಕೆ ಮೇರೆಗೆ ಬರೆದಿರುತ್ತೇನೆ. ವಿ.ಪಿ.ಸಿ. ನಂ.203 ರ ಆಸ್ತಿ ರಿಜಿಸ್ಟರನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ಸಾಕ್ಷಿ ತಾನು ಅಲ್ಲಿ ಈಗ ಕೆಲಸ ಮಾಡುತ್ತಿಲ್ಲ ಎಂದು ಹಾಗೂ ತಾನು ಲಿಂಗದಾಳ ಗ್ರಾಮ ಪಂಚಾಯತಿಯ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದೇನೆಂದು ಹೇಳುತ್ತಾರೆ. ಪಂಚಾಯತಿಯಲ್ಲಿ ಉತಾರ ಕೊಡಲು ಬೇರೆ ಒಬ್ಬ ಗುಮಾಸ್ತ ಇರುತ್ತಾನೆ ಎಂದರೆ ಸಾಕ್ಷಿ ಆ ಸಮಯದಲ್ಲಿ ಸೆಕರಟರಿ ಮಾತ್ರ ಇದ್ದರು ಎಂದು ಹೇಳುತ್ತಾರೆ. ಅವರು ಹೇಳಿದ ಕೆಲಸವನ್ನು ನಾವು ಮಾಡುತ್ತಿದ್ದೇವು. ಆ ಸಮಯದಲ್ಲಿ

ಸೆಕರಟರಿ ಉತಾರ ಬರೆದುಕೊಡುತ್ತಿದ್ದರು ಎಂದರೆ ನಿಜ. ಆ ಸಮಯದಲ್ಲಿ ಗ್ರಾಮ ಪಂಚಾಯತಿಯಲ್ಲಿ ಪಿ.ಡಿ.ಓ. ಇರಲಿಲ್ಲ. ಆ ಸಮಯದಲ್ಲಿ ಅನಿಲಕುಮಾರ ಬೇವಿನಮರದ ಎಂಬ ಪಿ.ಡಿ.ಓ. ಇದ್ದರು. ನಿಪಿಃ 3 ಉತಾರವನ್ನು ಬರೆದಾಗ ನಾನು ಬಿಲ್ಲ ಕಲೆಕ್ಟರ ಆಗಿ ಕೆಲಸ ಮಾಡುತ್ತಿದ್ದೆ ಎಂದು ತೋರಿಸಲು ನಾನು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ನಿಪಿಃ 3 ಉತಾರ ಬರೆದುಕೊಡಲು ನನಗೆ ಯಾವುದೇ ಅಧಿಕಾರ ಇರಲಿಲ್ಲ ಎಂದರೆ ಸಾಕ್ಷಿ ನಾನು ಪಿ.ಡಿ.ಓ ಹೇಳಿದ ಪ್ರಕಾರ ಅವರ ಆದೇಶ ಪಾಲನೆ ಮಾಡಿದ್ದೇನೆ ಎಂದು ಹೇಳುತ್ತಾರೆ. ನಾನು ಮೂಲ ರಿಜಿಸ್ಟರನಲ್ಲಿ ಯಾವ ತಾರೀಖನಂದು ಹಾಗೂ ಯಾವ ದಾಖಲೆ ನೋಡಿ, ಬಸಪ್ಪ ಫಕೀರಪ್ಪ ಕೊಪ್ಪದ ಮತ್ತು ಗೋಪಾಲ ಬಸಪ್ಪ ವಾಲ್ಮೀಕಿ ಇವರ ಹೆಸರನ್ನು ಯಾವ ಆಧಾರದ ಮೇಲೆ ಬರೆದೆ ಎಂಬ ಪ್ರಶ್ನೆಗೆ ಸಾಕ್ಷಿ ನಾನು ಪಂಚಾಯತಿಯ ಠರಾವು ಮತ್ತು ಕಾರ್ಯದರ್ಶಿ ಯ ಅದೇಶದ ಮೇರೆಗೆ ಬರದಿದ್ದೇನೇ ಎಂದು ಹೇಳುತ್ತಾರೆ. ನನಗೆ ಸದರಿ ಉತಾರ ಮತ್ತು ರಿಜಿಸ್ಟರ ಬರೆಯಲು ನನಗೆ ಲಿಖಿತವಾಗಿ ಆದೇಶ ನೀಡಿಲ್ಲ. ಆಸ್ತಿ ಉತಾರದ ರಿಜಿಸ್ಟರ  ನ್ನು ಬರೆಯಲು ಒಬ್ಬ ಪ್ರತ್ಯೇಕ ಗುಮಾಸ್ತ ಇರುತ್ತಾನೆ ಎಂದರೆ ಸರಿ ಅಲ್ಲ. ಸದರಿ ರಿಜಿಸ್ಟರನ್ನು ಬರೆಯಲು ಬಿಲ್ಲ ಕಲೆಕ್ಟರಗೆ ಅಧಿಕಾರ ಇರುವುದಿಲ್ಲ ಎಂದರೆ ನಿಜ. ಸಾಕ್ಷಿ ಮುಂದುವರೆದು ಕಾರ್ಯದರ್ಶಿ ಹೇಳಿದ ಮೇರೆಗೆ ಬರೆದಿದ್ದೇನೆ ಎಂದು ಹೇಳುತ್ತಾರೆ. ಕಾರ್ಯದರ್ಶಿ ಯಾವ ದಾಖಲೆಗಳನ್ನು ಪರಿಶೀಲನೆ ಮಾಡಿ, ಅವರ ಹೆಸರನ್ನು ಬರೆಯಲು ಹೇಳಿದರು ಎಂದು ನಾನು

ನೋಡಲಿಲ್ಲ. ಆ ರಿಜಿಸ್ಟರನಲ್ಲಿ ಬರೆಯುವಾಗ ಶ್ರೀಮತಿ ಎಸ್. ಎಸ್. ಪೂಜಾರ ಎಂಬುವವರು ಕಾರ್ಯದರ್ಶಿ ಯಾಗಿದ್ದರು. ಅವರು ಈಗ ಬದುಕಿದ್ದಾರೆ . ಅವರು ಈಗ ಎಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಾನು ಗೋಪಾಲ ವಾಲ್ಮೀಕಿ ಇವರ ಪ್ರಭಾವಕ್ಕೆ ಒಳಗಾಗಿ , ಸುಳ್ಳು ದಾಖಲೆಯನ್ನು ಸೃಷ್ಟಿ ಮಾಡಿದ್ದೇನೆಂದರೆ ಸರಿ ಅಲ್ಲ. ಆ ಸಮಯದಲ್ಲಿ ಪಿ.ಡಿ.ಓ ಮತ್ತು ಕಾರ್ಯದರ್ಶಿ ನನಗೆ ಬರೆಯಲು ಕೊಟ್ಟಿರಲಿಲ್ಲ ಎಂದರೆ ಸರಿ ಅಲ್ಲ. ಆಗಿನ ಪಿ.ಡಿ.ಓ ಮತ್ತು ಕಾರ್ಯದರ್ಶಿ ಇವರನ್ನು ಕರೆಯಿಸಿ, ಸಾಕ್ಷಿ ಮಾಡಿಸಿದರೆ ಸತ್ಯಾಂಶ ಗೊತ್ತಾಗುತ್ತದೆ ಎಂದು ಗೋಪಾಲ ವಾಲ್ಮೀಕಿ ನನ್ನನ್ನು ಕರೆಯಿಸಿ , ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿ ಅಲ್ಲ. ನಾನು ಗೋಪಾಲ ವಾಲ್ಮೀಕಿ ಇವರಿಗೆ ಅನೂಕೂಲ ಆಗಲಿ ಹಾಗೂ ಅವರಿಗೆ ಇಲ್ಲದ ಆಸ್ತಿಯ ಸಿಗಲಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿ ಅಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗತಿಗಳು ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿ ಅಲ್ಲ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ ಅದೆ.

**(ಆದಿತ್ಯ ಆರ್ ಕಲಾಲ್ )**
**ಹೆಚ್ಚುವರಿ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ**
**ನ್ಯಾಯಾಧೀಶರು ರೋಣ.**